ಓಎಸ್ ನಂಬರ್: 44/2014 ಡಿ ಡಬ್ಲ್ಯು: 1

**ದಿ:25.01.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಆರ್ ಜೆ ವಕೀಲರಿಂದ:**

ನಾನು, ವಾದಿಗಳು ಮತ್ತು 1 ರಿಂದ 15 ಮತ್ತು 18 ನೇ ಪ್ರತಿವಾದಿಗಳು ಕರ್ಕರನ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಕರ್ಕರನ ತಿಮ್ಮಯ್ಯ ನನಗೆ ತಾತ ಆಗಬೇಕು. ತಿಮ್ಮಯ್ಯನ ಹೆಂಡತಿ ಗೌರಮ್ಮ. ಅವರು ಮರಣ ಹೊಂದಿದ್ದಾರೆ. ತಿಮ್ಮಯ್ಯನವರು 1987 ರಲ್ಲಿ ಮರಣ ಹೊಂದಿದ್ದಾರೆ. ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇದೆ. ಗೌರಮ್ಮನವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇದೆ. ತಿಮ್ಮಯ್ಯನವರಿಗೆ 7 ಜನ ಮಕ್ಕಳು. ಅವರೆಂದರೆ 1 ರಿಂದ 3, ಕುಶಾಲಪ್ಪ(ವಾದಿಗಳ ತಂದೆ), ತಮ್ಮಯ್ಯ, ನೀಲಮ್ಮ ಮತ್ತು ಜೋಯಪ್ಪ. ತಮ್ಮಯ್ಯ ಮತ್ತು ಆತನ ಹೆಂಡತಿ ಯಾವುದೇ ಸಂತಾನವಿಲ್ಲದೇ

ಮರಣ ಹೊಂದಿದ್ದಾರೆ. ನೀಲಮ್ಮ ಮರಣ ಹೊಂದಿದ್ದು, ಪ್ರತಿವಾದಿ 7 ರಿಂದ 9 ರವರು ಅವರ ಮಕ್ಕಳು. ಜೋಯಪ್ಪ ಮರಣ ಹೊಂದಿದ್ದು, 10 ರಿಂದ 15ನೇ ಪ್ರತಿವಾದಿಗಳು ಅವರ ಹೆಂಡತಿ ಮಕ್ಕಳು. ನನ್ನ ತಂದೆ 2ನೇ ಪ್ರತಿವಾದಿ, ಇವರಿಗೆ ನಾವು ಒಟ್ಟು 5 ಜನ ಮಕ್ಕಳಿದ್ದೇವೆ. ಚಿನ್ನಮ್ಮ ನನ್ನ ತಾಯಿ, ನಾನು, ಗನಾವತಿ, ರುಕ್ಮಿಣಿ ಮತ್ತು 6 ಮತ್ತು 18ನೇ ಪ್ರತಿವಾದಿಯವರು 2ನೇ ಪ್ರತಿವಾದಿಯ ಮಕ್ಕಳು. 4 ಮತ್ತು 5ನೇ ಪ್ರತಿವಾದಿಗಳು ದೊಡ್ಡಯ್ಯನ ಮಕ್ಕಳು ಎಂದರೆ ಸರಿ. ಸುಕನ್ಯ, ವೀಣಾ ಮತ್ತು ವಸಂತರವರು ಅವರ ಹೆಂಡತಿ ಮಕ್ಕಳು.

ವಾದಿಗಳು ಈ ದಾವೆಯನ್ನು ಯಾವ ಪರಿಹಾರಕ್ಕಾಗಿ ಹಾಕಿದ್ದಾರೆ ಎಂದು ನನಗೆ ಗೊತ್ತು. ದಾವಾ ಆಸ್ತಿಗಳು ಮೊದಲಿಗೆ ತಿಮ್ಮಯ್ಯನವರಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ಅವರ ಮರಣ ನಂತರ ಅವರ 7 ಜನ ಮಕ್ಕಳು ಜಂಟಿ ಸ್ವಾಧೀನದಲ್ಲಿದ್ದು, ಕೃಷಿ ಮಾಡುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿಗೆ 92 ವರ್ಷ ವಯಸ್ಸಾಗಿದ್ದು, ಅವರ ತಂಗಿ ನೀಲಮ್ಮರವರಿಗೆ 72 ವರ್ಷ ವಯಸ್ಸಾಗಿತ್ತು. ಅವರ ಜನ್ಮ ದಿನಾಂಕದ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ. 1956ರ ಹಿಂದೆ ಅವರು ಜನಿಸಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಂದೆ ಏನೂ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನ ತಾತ ತಿಮ್ಮಯ್ಯರವರು ದಾವಾ ಆಸ್ತಿಗಳಲ್ಲದೇ, ಕಾಲೂರು ಗ್ರಾಮದಲ್ಲಿ 120 ಎಕರೆ ಆಸ್ತಿಗಳನ್ನು ಹೊಂದಿದ್ದು, ಆ ಆಸ್ತಿಗಳನ್ನು ಜೋಯಪ್ಪ, ಕುಶಾಲಪ್ಪ ಮತ್ತು ತಮ್ಮಯ್ಯರವರಿಗೆ ವಿಭಾಗ ಮಾಡಿ ಕೊಟ್ಟಿದ್ದರು. ಈ ಬಗ್ಗೆ ದಾಖಲೆಗಳನ್ನು ಕೊಟ್ಟಿದ್ದು, ಉಳಿದ ದಾಖಲೆಗಳನ್ನು ಕೊಡಲು ನನಗೆ ತೊಂದರೆ ಇಲ್ಲ. ಆ ದಾಖಲೆಗಳು ಕಂದಾಯ ಇಲಾಖೆಯಲ್ಲಿ ಇವೆ. ಕ್ರಯ ಪತ್ರಗಳು ನನ್ನ ತಂದೆಯ ಬಳಿ ಇದ್ದವು. ಕಾಲೂರಿನ ಆಸ್ತಿಗಳನ್ನು 02.03.1972ರಂದು ವಿಭಾಗ ಮಾಡಿದ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. ಆ ವಿಭಾಗ ಪತ್ರವು ನನ್ನ ಅಜ್ಜ ತಿಮ್ಮಯ್ಯ ಮತ್ತು ಅವರ ಮಕ್ಕಳ ನಡುವೆ ಆದ ದಾಖಲೆಯಾಗಿದೆ. ಯಾರ ಪಾಲಿಗೆ ಎಷ್ಟು ವಿಸ್ತೀರ್ಣದ ಆಸ್ತಿ ಯಾವ ಸರ್ವೆ ನಂಬರ್ ನಲ್ಲಿ ಹೋಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ಸಹ ಅದೇ ದಿನದಂದು ವಿಭಾಗ ಆಗಿವೆ. 1972ರ ವಿಭಾಗ ಪತ್ರದಂತೆ ಪಾಲುದಾರರು ತಮ್ಮ ಹೆಸರಿಗೆ ಆಸ್ತಿಗಳ ಖಾತೆ ವರ್ಗಾವಣೆ ಮಾಡಿಕೊಂಡಿದ್ದಾರೆ. ದಾವಾ ಆಸ್ತಿಗಳು ಯಾರ

ಸ್ವಾಧೀನದಲ್ಲಿ ಇವೆಯೋ ಅವರ ಹೆಸರಿನಲ್ಲಿ ಕಂದಾಯ ದಾಖಲೆಗಳು ಇವೆ. ಹಕ್ಕು ಬದಲಾವಣೆ ಆದ ಬಗ್ಗೆ ದಾಖಲೆಗಳು ಇವೆ. ಈಗಿನ ಕಂದಾಯ ದಾಖಲೆಗಳಲ್ಲಿ ತಿಮ್ಮಯ್ಯರವರ ವಾರಸುದಾರರ ಹೆಸರಿನಲ್ಲಿ ಜಂಟಿ ಆಗಿ ಇವೆ ಎಂದರೆ ಸರಿ. ದಾವಾ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿ 1 ರಿಂದ 16 ರವರು ಜಂಟಿ ಆಗಿ ಕೃಷಿ ಮಾಡುತ್ತಿದ್ದಾರೆ ಎಂದರೆ ಸರಿ.

ಸುಳ್ಯ ತಾಲೂಕು ಆಲೆಟ್ಟಿ ಗ್ರಾಮದಲ್ಲಿ ನನ್ನ ತಾತ ತಿಮ್ಮಯ್ಯರವರು ಆಸ್ತಿಗಳನ್ನು ಖರೀದಿಸಿದ್ದರು. ಈ ಆಸ್ತಿಗಳು ನನ್ನ ತಂದೆಯ ಸ್ವಾಧೀನದಲ್ಲಿ ಇದ್ದು, ಈಗ ನಾನು ಮತ್ತು ನನ್ನ ತಮ್ಮಂದಿರು ಹಾಗೂ ವಾದಿಗಳು ಜಂಟಿ ಸ್ವಾಧೀನದಲ್ಲಿದ್ದೇವೆ. ಆಲೆಟ್ಟಿ ಗ್ರಾಮದ ಆಸ್ತಿಗಳನ್ನು ನಾವುಗಳು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದೇವೆ. ಆ ವಿಭಾಗ ಪತ್ರದಂತೆ ವಾದಿಗಳು ಮತ್ತು ಪ್ರತಿವಾದಿಗಳು ಬೇರೆ ಬೇರೆ ಸ್ವಾಧೀನದಲ್ಲಿದ್ದೇವೆ. ಆ ವಿಭಾಗ ಪತ್ರದಲ್ಲಿ ದಾವಾ ಆಸ್ತಿಗಳು ಸೇರಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಯಾವ ಕಾಲದಲ್ಲಿಯೂ ವಿಭಾಗ ಆಗಿಲ್ಲ ಎಂದರೆ ಸುಳ್ಳು. ಆ ಕಾರಣದಿಂದ ನಾನು ಯಾವುದೇ ದಾಖಲೆಗಳನ್ನು ವಿಭಾಗ ಆದ ಬಗ್ಗೆ ತೋರಿಸಲು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ವಿಭಾಗ ಆಗದ ಕಾರಣ ಆ ರೀತಿಯ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-
(ವಿಜಯಕುಮಾರ್)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.